ಮಾಡತ್ತೀವಿ ಪೂಜೆಗೆ ಬನ್ನಿ ಎಂದು ಎಲ್ಲರಿಗೂ ಫೋನಾಯಿಸಿದ್ದ. ಅಪ್ಪ ಊರಲ್ಲಿದ್ದ ಕಾರಣ ನಾನು ಹೆಂಡತಿ ಅಮ್ಮ ಮೂವರು ಹೋಗಿದ್ದೆವು. ದೊಡ್ಡದಾದ ಸೈಟಿನಲ್ಲಿ ನಾಲ್ಕು ಬೆಡ್ ರೂಮುಗಳ ಮನೆ. ತುಂಬಾ ಖುಷಿಯಾಗಿ ಪೂಜೆ ಮುಗಿಸಿಕೊಂಡು ಬಂದೆವು. ನನ್ನೆಂಡತಿ ಆವತ್ತಿನಿಂದ ನೆಟ್ಟಗೆ ನಿದ್ದೆ ಮಾಡ್ತಿಲ್ಲ.

ಇಂತ ಹಲವಾರು ಏರುಪೇರೊಳಗೆ ಅವರೊಳಗೆ ಅವರಿಲ್ಲದ ಮನಸ್ಸುಗಳು ಒದ್ದಾಡುತ್ತಿರುವ ಈ ಹೊತ್ತಿನಲ್ಲಿ ಮನೆ ದ್ಯಾವರುಸಿದ್ದೇಶ್ವರನ ಗುಡಿಯ ಸಮಿತಿಯಲ್ಲಿ ದಿನ ಕ್ರಮೇಣ ಇಬ್ಭಾಗವಾಗತೊಡಗಿತು. ಒಂದಷ್ಟು ಸಮಿತಿಯ ಸದಸ್ಯರು ಅಸಮಾನದಲ್ಲಿದ್ದ ದೊಡ್ಡಪ್ಪನ ಮಗನ ಕಡೆ ಮುಖಾ ಮಾಡತೊಡಗಿದರು. ಉಳಿದ ಕೆಲವರು ಅಪ್ಪನ ಮಾತಿನಂತಿದ್ದರು. ಇಂಗೆ ದಿನಗಳುರುಳುತ್ತಿದ್ದಂತೆ ಅಪ್ಪನ ಕಡೆಯಿದ್ದವರು ಅವನನ್ನಷ್ಟೆ ಕೈಗೊಂಬೆ ಮಾಡಿಕೊಂಡರಾಗಲಿ ಸಲೀಸಾಗಿ ಅಪ್ಪನ ಅಭಿಪ್ರಾಯಗಳಿಗೆ ಕಿಮ್ಮತ್ತು ಕೊಡದಾದರು. ದೇವಸ್ಥಾನ ತುಂಬಾ ಹಳೆಯದಾಗಿದ್ದು ವಿಪರೀತ ಮಳೆಗಾಲದ ಜಡಿಯ ಕಾಲದಲ್ಲಿ ಅಲ್ಲಲ್ಲಿ ತೊಟ್ಟಿಕ್ಕಲಾರಂಭಿಸಿದೆಯೆಂದು. ನೀನು ಯಾವಸೀಮೆ ಯಜಮಾನ ಅದುನ್ನ ಯಾವಾಗ ರಿಪೇರಿ ಮಾಡಸ್ತೀಯಾ? ಬರಿ ಇಲ್ಲಿ ಹೆಸರಿಗೆ ಮಾತ್ರ ಒದ್ದಾಡ್ತೀಯೆಂದು ಅಪ್ಪನ ವಿರುದ್ಧದ ಅಪಸ್ವರಗಳನ್ನು ದೊಡ್ಡಪ್ಪನ ಮಗನೆ ಉರಿದುಂಬಿಸಲಾರಂಭಿಸಿದ. ಆಯಿತಂಗಾದ್ರೆ ಇಂತದಿನ ಎಲ್ಲರು ಕಮಿಟಿಯಿಂದ ಸಭೆ ಸೇರಿ ಅದೇನು ತೀರ್ಮಾನ ತಗಳಬೇಕೆಂದು ಅಪ್ಪ ಕೇಳಿಕೊಂಡರೆ, ಆಯಿತೇಳು ಕಮಿಟಿಯವರನ್ನೆಲ್ಲ ನೀನೆ ಸೇರಿಸು ಅದೇನು ಖರ್ಚು ವೆಚ್ಚದ ಬಗ್ಗೆ ಅಭಿಪ್ರಾಯ ಕೇಳೋಣವೆಂದು ಪುಸಲಾಯಿಸಿದ ಮೇನಾಮಿ ಮುಖಂಡರೆ ಸಭೆಗೆ ಬರದೆ ಸತಾಯಿಸತೊಡಗಿದರು.

